# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 873 |
| ಉತ್ತರಿಸುವ ದಿನಾಂಕ | 24-07-2024 |
| ಮಾನ್ಯ ಸದಸ್ಯರ ಹೆಸರು | ಶ್ರೀ ಪ್ರತಾಪ ಸಿಂಹ ನಾಯಕ್ ಕೆ. (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದ ಸಬ್ ರಿಜಿಸ್ಟ್ರಾರ್ ಕಛೇರಿಗಳಿಗೆ ದಸ್ತಾವೇಜುಗಳ ನೋಂದಣಿಗೆ ಬರುವವರಿಗೆ ತಂತ್ರಾಂಶದ ಸಮಸ್ಯೆ ಅನಗತ್ಯ ಹಾಗೂ ಲಭ್ಯವೇ ಇಲ್ಲದ ಹಲವಾರು ದಾಖಲಾತಿಗಳನ್ನು ಒದಗಿಸಬೇಕಾದ ಅನಿವಾರ್ಯತೆ ಟೈಮ್ ಸ್ಲಾಟ್ ಜಾರಿಯಲ್ಲಿ ಗೊಂದಲ ನೋಂದಣಿ ಪೂರ್ವ ಸ್ವಯಂಚಾಲಿತ ಆಡಿಟ್ ಪದ್ಧತಿ ಅಳವಡಿಕೆಯ ಕಾರಣ ಹಾಗೂ ಇನ್ನೂ ಹಲವಾರು ಅವೈಜ್ಞಾನಿಕ ನಿಯಮಗಳಿಂದ ನಿಗದಿತ ಸಮಯದೊಳಗೆ ನೋಂದಣಿ ಪ್ರಕ್ರಿಯೆ ಮುಗಿಯದೆ ಸಾರ್ವಜನಿಕರಿಗೆ ಸಾಕಷ್ಟು ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | 1. ಕಾವೇರಿ-2.0 ತಂತ್ರಾಂಶವು ನೂತನ ತಂತ್ರಾಂಶವಾಗಿದ್ದು, ಇದನ್ನು ಜೂನ್-2023 ರಿಂದ ರಾಜ್ಯದ ಎಲ್ಲಾ ಉಪನೋಂದಣಿ ಕಛೇರಿಗಳಲ್ಲಿ ಅಳವಡಿಸಲಾಗಿರುತ್ತದೆ. ಈ ತಂತ್ರಾಂಶದಲ್ಲಿ Public Interface ಇರುವುದರಿಂದ ಸಾರ್ವಜನಿಕರು ಆನ್‌ಲೈನ್ ಮುಖಾಂತರ ದಸ್ತಾವೇಜಿನ ನೋಂದಣಿಗೆ ಸಂಬಂಧಿಸಿದ ಶೇ.90ರಷ್ಟು ಕೆಲಸವನ್ನು ಪೂರ್ಣಗೊಳಿಸಿರುತ್ತಾರೆ. ತಂತ್ರಾಂಶದ ಕಾರ್ಯಾಚರಣೆಯಲ್ಲಿ ಸಾರ್ವಜನಿಕರ ಪಾತ್ರ ಹೆಚ್ಚಾಗಿರುವುದರಿಂದ ಪ್ರಾರಂಭದ ದಿನಗಳಲ್ಲಿ ತಂತ್ರಾಂಶವನ್ನು ಉಪಯೋಗಿಸುವಲ್ಲಿ ಸಾರ್ವಜನಿಕರಿಗೆ ಕೆಲವು ಸಮಸ್ಯೆಗಳು ಕಂಡು ಬಂದಿದ್ದು, ಅವುಗಳನ್ನು ಕಾಲಕ್ರಮೇಣ ಪರಿಹರಿಸಲಾಗಿರುತ್ತದೆ.<br><br>2. ದಸ್ತಾವೇಜುಗಳು ನೋಂದಣಿಗೆ ನೋಂದಣಿ ಕಾಯ್ದೆ 1908, ಕರ್ನಾಟಕ ನೋಂದಣಿ ನಿಯಮಾವಳಿಗಳು 1965 ಹಾಗೂ ಇದರಡಿ ಸರ್ಕಾರದಿಂದ ಹೊರಡಿಸಲಾಗಿರುವ ಸುತ್ತೋಲೆಗಳಲ್ಲಿ ನಿಗದಿಪಡಿಸಿರುವ ದಾಖಲೆಗಳನ್ನು ಮಾತ್ರ ಸಲ್ಲಿಸಬೇಕಾಗಿರುತ್ತದೆ. ಕಾವೇರಿ-2.0 ತಂತ್ರಾಂಶದ ಅನುಷ್ಠಾನದ ನಂತರ ದಸ್ತಾವೇಜುಗಳ ನೋಂದಣಿಗೆ ಯಾವುದೇ ಹೊಸ ದಾಖಲಾತಿಗಳನ್ನು ನಿಗದಿಪಡಿಸಿರುವುದಿಲ್ಲ.<br><br>3. ಉಪನೋಂದಣಿ ಕಛೇರಿಗಳಲ್ಲಿ ಜನಸಂದಣಿ ಕಡಿಮೆ ಮಾಡುವ ಉದ್ದೇಶದಿಂದ ಹಾಗೂ ನೋಂದಣಿಗೆ ಬರುವ ಸಾರ್ವಜನಿಕರಿಗೆ ಯಾವುದೇ ಗೊಂದಲಗಳಿಲ್ಲದೆ ದಸ್ತಾವೇಜನ್ನು ತ್ವರಿತವಾಗಿ ನೋಂದಾಯಿಸಿ ಸೇವೆ ನೀಡುವ ಉದ್ದೇಶದಿಂದ Time Slot ಜಾರಿ ಮಾಡಲಾಗಿರುತ್ತದೆ. ಸಾರ್ವಜನಿಕರು ತಾವು ಆಯ್ಕೆ ಮಾಡಿಕೊಂಡಿರುವ ದಿನಾಂಕದಂದು ನಿಗದಿಯಾಗಿರುವ Time Slot ನಲ್ಲಿ ಉಪನೋಂದಣಿ ಕಛೇರಿಗೆ ಹಾಜರಾಗಿ ನೋಂದಾಯಿಸಿಕೊಳ್ಳಬಹುದಾಗಿರುತ್ತದೆ. ಸಕಾಲದಲ್ಲಿ ಹಾಜರಾಗದಿದ್ದಲ್ಲಿ, ಅದೇ ದಿನ ಹೊರತುಪಡಿಸಿ ಮುಂದಿನ ಯಾವುದಾದರೂ ದಿನದಲ್ಲಿ ದಸ್ತಾವೇಜನ್ನು |

| | | |
|---|---|---|
| | | ನೋಂದಾಯಿಸಿಕೊಳ್ಳಬಹುದಾಗಿದೆ.<br><br>4. ಉಪನೋಂದಣಿ ಕಛೇರಿಗಳಲ್ಲಿ ವಿವಿಧ ಕಾರಣಗಳಿಂದ ಸರ್ಕಾರಕ್ಕೆ ಉಂಟಾಗುತ್ತಿರುವ ರಾಜಸ್ವ ನಷ್ಟವನ್ನು ತಡೆಗಟ್ಟುವ ಉದ್ದೇಶದಿಂದ ನೋಂದಣಿ ಪೂರ್ವದಲ್ಲಿ ಕೆಲವೊಂದು ವಿಧದ ದಸ್ತಾವೇಜುಗಳನ್ನು ಮಾತ್ರ ಪರಿಶೀಲನೆಗೆ ಒಳಪಡಿಸಲು ಉದ್ದೇಶಿಸಲಾಗಿರುತ್ತದೆ. ಈ ಪ್ರಕ್ರಿಯೆಯು ನಿಗದಿತ ಕಾಲಮಿತಿಯೊಳಗೆ ಪೂರ್ಣಗೊಳ್ಳುವುದರಿಂದ ಸಾರ್ವಜನಿಕರಿಗೆ ಯಾವುದೇ ತೊಂದರೆಯಾಗುವುದಿಲ್ಲ. ಈ ವ್ಯವಸ್ಥೆಯನ್ನು ಪ್ರಸ್ತುತ ಪ್ರಾಯೋಗಿಕವಾಗಿ ಗಾಂಧಿನಗರ ಜಿಲ್ಲಾ ನೋಂದಣಿ ಕಛೇರಿಯ ವ್ಯಾಪ್ತಿಯಲ್ಲಿರುವ ಉಪನೋಂದಣಿ ಕಛೇರಿಗಳಲ್ಲಿ ಮಾತ್ರ ಅಳವಡಿಸಲಾಗಿರುತ್ತದೆ.<br><br>5. ಕಾವೇರಿ-2.0 ತಂತ್ರಾಂಶದಲ್ಲಿ ಎಂದಿನಂತೆ ದಸ್ತಾವೇಜುಗಳ ನೋಂದಣಿಯಾಗುತ್ತಿದ್ದು ಹಾಗೂ ಸಾರ್ವಜನಿಕರು ತಾವೂ ಆಯ್ಕೆ ಮಾಡಿಕೊಂಡಿರುವ ದಿನಾಂಕದಂದು ನಿಗದಿಯಾಗಿರುವ Slot ಗಳಲ್ಲಿ ವಿಳಂಬವಿಲ್ಲದೆ ನೋಂದಣಿಯನ್ನು ಪೂರ್ಣಗೊಳಿಸಿ ಕೊಳ್ಳುತ್ತಿದ್ದಾರೆ. |
| ಆ | ಬಂದಿದ್ದಲ್ಲಿ, ಪ್ರತಿದಿನ ಒಂದಿಲ್ಲೊಂದು ಸಮಸ್ಯೆ ಎದುರಾಗುತ್ತಿದ್ದು, ಜನರಿಗೆ ಸಾಕಷ್ಟು ತೊಂದರೆಯಾಗುತ್ತಿದ್ದರೂ, ಸಮಸ್ಯೆ ಬಗೆಹರಿಸಲು ಮತ್ತು ಜನಸ್ನೇಹಿ ಸರಾಗ ಹಾಗೂ ವಿಳಂಬರಹಿತ ನೋಂದಣಿ ಪ್ರಕ್ರಿಯೆಗೆ ಸರ್ಕಾರ ಇದುವರೆಗೆ ಯಾವ ಕ್ರಮಗಳನ್ನು ಕೈಗೊಂಡಿದೆ; | ಕಾವೇರಿ-2.0 ತಂತ್ರಾಂಶವು ಇತರೆ ಇಲಾಖೆಗಳ ತಂತ್ರಾಂಶಗಳಾದ ಮೋಜಣಿ, ಇ-ಸ್ವತ್ತು, ಇ-ಆಸ್ತಿ, ಸಕಾಲ ಮತ್ತು ಖಜಾನೆ-2 ತಂತ್ರಾಂಶಗಳೊಂದಿಗೆ ಸಂಯೋಜನೆಯಾಗಿದ್ದು, ಈ ತಂತ್ರಾಂಶಗಳಲ್ಲಿ ಸಮಸ್ಯೆಗಳು ಉಂಟಾದಲ್ಲಿ ಕಾವೇರಿ-2.0 ತಂತ್ರಾಂಶದಲ್ಲಿನ ದಸ್ತಾವೇಜಿನ ನೋಂದಣಿಗೆ ಪರಿಣಾಮ ಬೀರುತ್ತದೆ.<br><br>ಕಾವೇರಿ-2.0 ತಂತ್ರಾಂಶದಲ್ಲಿ ಯಾವುದೇ ತಾಂತ್ರಿಕ ಸಮಸ್ಯೆ ಉಂಟಾದಲ್ಲಿ ಅದನ್ನು ಕೂಡಲೇ ಪರಿಹರಿಸಿ ಸಾರ್ವಜನಿಕರಿಗೆ ಅದೇ ದಿನ ದಸ್ತಾವೇಜುಗಳನ್ನು ನೋಂದಾಯಿಸಿ ಕೊಡಲಾಗುತ್ತಿದೆ ಹಾಗೂ ಸಂಯೋಜನೆಗೊಂಡಿರುವ ಇತರೆ ತಂತ್ರಾಂಶಗಳಲ್ಲೂ ಸಮಸ್ಯೆ ಉಂಟಾದಲ್ಲಿ ಸಂಬಂಧಪಟ್ಟ ಇಲಾಖೆಗಳೊಂದಿಗೆ ಸಮನ್ವಯಿಸಿ ಶೀಘ್ರವಾಗಿ ಪರಿಹರಿಸಲು ಕ್ರಮಕೈಗೊಳ್ಳಲಾಗಿದೆ. |
| ಇ | ಯಾವ ಕಾಲಮಿತಿಯೊಳಗೆ ಪದೇ ಪದೇ ತಲೆದೋರುತ್ತಿರುವ ವಿವಿಧ ರೀತಿಯ ತಾಂತ್ರಿಕ ಸಮಸ್ಯೆಗಳನ್ನು ಸಂಪೂರ್ಣವಾಗಿ ಪರಿಹರಿಸುವುದು ಒದಗಿಸಬೇಕಾದ ದಾಖಲಾತಿಗಳ ಸಂಖ್ಯೆಯನ್ನು | ಕಾವೇರಿ-2.0 ತಂತ್ರಾಂಶದಲ್ಲಿ ಅಥವಾ ಅದರೊಂದಿಗೆ ಸಂಯೋಜನೆಗೊಂಡಿರುವ ತಂತ್ರಾಂಶಗಳಲ್ಲಿ ಸಮಸ್ಯೆ ಉಂಟಾಗಿ ದಸ್ತಾವೇಜಿನ ನೋಂದಣಿಗೆ ಅಡಚಣೆಯಾದರೆ ಅದನ್ನು ವ್ಯವಸ್ಥಿತವಾಗಿ ಹಾಗೂ ನಿಗದಿತ ಕಾಲಮಿತಿಯೊಳಗೆ ಪರಿಹರಿಸಲು ಕ್ರಮಕೈಗೊಳ್ಳಲಾಗಿದೆ. |

| | | |
|---|---|---|
| | ಸೀಮಿತಗೊಳಿಸುವುದು ಕಛೇರಿಗಳ ಮೇಲಿನ ಒತ್ತಡ ಕಡಿಮೆ ಮಾಡಲು ಅಗತ್ಯ ಮಾನವ ಸಂಪನ್ಮೂಲ ಒದಗಿಸುವುದು ಸೇರಿದಂತೆ ನೋಂದಣಿ ಪ್ರಕ್ರಿಯೆಯನ್ನು ಸರಳ ಜನಸ್ನೇಹಿ ತ್ವರಿತಗೊಳಿಸಲು ಅಗತ್ಯ ಕ್ರಮ ವಹಿಸಲಾಗುವುದು? | ಕಾವೇರಿ-2.0 ತಂತ್ರಾಂಶ ಜಾರಿಯಾದ ನಂತರ ದಸ್ತಾವೇಜಿನ ನೋಂದಣಿಗೆ ಸಲ್ಲಿಸಬೇಕಾದ ದಾಖಲೆಗಳ ಸಂಖ್ಯೆಯಲ್ಲಿ ಯಾವುದೇ ಹೆಚ್ಚಳ ಮಾಡಿರುವುದಿಲ್ಲ.<br><br>ಪ್ರತಿ ಉಪನೋಂದಣಿ ಕಛೇರಿಯಲ್ಲಿ ದಸ್ತಾವೇಜುಗಳ ನೋಂದಣಿಗೆ ಕನಿಷ್ಠ 02 ಗಣಕಯಂತ್ರ ನಿರ್ವಾಹಕರನ್ನು ಒದಗಿಸಲಾಗಿರುತ್ತದೆ. ಪ್ರತಿ ಗಣಕ ಯಂತ್ರ ನಿರ್ವಾಹಕರಿಗೆ ಪ್ರತಿ ದಿನ ಸರಾಸರಿ 25 ದಸ್ತಾವೇಜುಗಳನ್ನು ನಿಗದಿಪಡಿಸಲಾಗಿದ್ದು, ಈ ಸಂಖ್ಯೆಯಲ್ಲಿ ಏರಿಕೆಯಾದಲ್ಲಿ ಹೆಚ್ಚುವರಿ ಗಣಕಯಂತ್ರ ನಿರ್ವಾಹಕರನ್ನು ಒದಗಿಸಲಾಗುತ್ತಿದೆ. |

ಕಂಇ/126/ಎಂಎನ್‌ಎಸ್‌ಎ/2024

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು